ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 1069/2021

ಸಿ ಡಬ್ಲ್ಯೂ-7
ಪಿ ಡಬ್ಲ್ಯೂ-5

ದಿಃ 06-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ರಾಜು ಗೌಡ |
| ತಂದೆಯ ಹೆಸರುಃ | ಮಂಕಾಳು ಗೌಡ |
| ವಯಸ್ಸುಃ | 51 ವರ್ಷ |
| ಉದ್ಯೋಗಃ | ಕೂಲಿ ಕೆಲಸ |
| ವಿಳಾಸಃ | ಬೇಲೆಕೇರಿ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ಅಂದಾಜು 2 ವರ್ಷಗಳ ಹಿಂದೆ ನಾನು ಕೆಲಸ ಮುಗಿಸಿ ಹಾರವಾಡ ಕ್ರಾಸ್ ನಲ್ಲಿ ಸಂಜೆ 6.30 ಗಂಟೆಗೆ ಬರುತ್ತಿರುವಾಗ ಬೈಕ್ ಮತ್ತು ಡಂಪರ್ ಗಾಡಿ ಟಿಪ್ಪರ್ ವಾಹನಗಳ ಮಧ್ಯ ಅಪಘಾತವಾಗಿರುವುದನ್ನು ನಾನು ನೋಡಿರುತ್ತೇನೆ. ವಾಹನಗಳ ಸಂಖ್ಯೆ ಹೇಳಲು ಬರುವುದಿಲ್ಲ. ಬೈಕ್ ಸವಾರನು ಸ್ಥಳದಲ್ಲೇ ಮರಣಪಟ್ಟಿರುತ್ತಾನೆ. ಬೈಕಿನ ಮೇಲೆ ಇಬ್ಬರು ಇದ್ದು, ಬೈಕ್ ಚಲಾಯಿಸುವವನು ಮರಣಪಟ್ಟಿರುತ್ತಾನೆ. ಹಿಂಬದಿ ಸವಾರನಿಗೆ ಪಟ್ಟಾಗಿದ್ದು, ಕೂಡಲೆ ಐ ಆರ್ ಬಿ ವಾಹನ ಬಂದು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಡಂಪರ್ ವಾಹನವು ಹೊಡೆದಿರುತ್ತದೆ. ಮತ್ತೆ ಯಾರಿಗೂ ಏನೂ ಆಗಿರುವುದಿಲ್ಲ. ಡಂಪರ್ ವಾಹನವು ಕಾರವಾರದಿಂದ ಅಂಕೋಲಾ ಕಡೆಗೆ ಬರುತ್ತಿತ್ತು.

ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಅಪಘಾತಪಡಿಸಿದ ವಾಹನದ ಚಾಲಕನನ್ನು ನಾನು ನೋಡಿರುವುದಿಲ್ಲ. ಆರೋಪಿಯನ್ನು ನಾನು ನೋಡಿರುವುದಿಲ್ಲ. ಬೈಕಿನ ಹಿಂಬದಿ ಸವಾರನ ಉಪಚಾರ ಮಾಡುತ್ತಿದ್ದರಿಂದ ನಾನು ವಾಹನದ ಸಂಖ್ಯೆ ಮತ್ತು ಡಿಕ್ಕಿ ಹೊಡೆದ ವಾಹನದ ಚಾಲಕನನ್ನು ನೋಡಲು ಸಾಧ್ಯವಾಗಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ದಿಃ 30-07-2021 ರಂದು ಅಪಘಾತವಾಗಿರುತ್ತದೆ ಎಂದರೆ ಸರಿ. ನೀವು ಹೇಳುವ ಡಂಪರ್ ವಾಹನವು ಟಿಪ್ಪರ್ ಲಾರಿಯಾಗಿತ್ತು ಎಂದರೆ ಸಾಕ್ಷಿಯು ಅದಕ್ಕೆ ಡಂಪರ್ ಹಾಗೂ ಟಿಪ್ಪರ್ ಎಂದು ಎರಡೂ ಕರೆಯಾಗುತ್ತದೆ ಎಂದು ನುಡಿಯುತ್ತಾರೆ. ಟಿಪ್ಪರ್ ಲಾರಿ ಚಾಲಕ ಯಾವುದೇ ಕೈಸನ್ನೆ ಮಾಡದೇ ಹಾರವಾಡ ಕ್ರಾಸ್ ಗೆ ತಲುಪಿದಾಗ ಸದರಿ ಅಪಘಾತವಾಗಿರುತ್ತದೆ ಎಂದರೆ ಸರಿ. ಅಪಘಾತಕ್ಕೆ ಒಳಪಟ್ಟ ವಾಹನದ ನಂ. ಕೆ ಎ 31 ಡಬ್ಲ್ಯೂ 9212 ಆಗಿತ್ತು ಎಂದರೆ ನಾನು ನೋಡಿರುವುದಿಲ್ಲ. ಅಪಘಾತಪಡಿಸಿದ ಟಿಪ್ಪರ್ ವಾಹನ ನಂ. ಎ ಆರ್ 02/2941 ಆಗಿತ್ತು ಎಂದರೆ ಸರಿ. ಸದರಿ ಅಪಘಾತಕ್ಕೆ ಟಿಪ್ಪರ್ ಲಾರಿ ಚಾಲಕನಾದ ಆರೋಪಿಯ ಅತಿ ವೇಗ ಹಾಗೂ ನಿರ್ಲಕ್ಷತನದ ಕಾರಣದಿಂದ ಆಗಿರುತ್ತದೆ ಎಂದು ಹೇಳಿಕೆ ನೀಡಿರುತ್ತೀರಿ ಎಂದರೆ ಸಾಕ್ಷಿಯು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಗಡಿಬಿಡಿಯಲ್ಲಿ ಹೇಳಲು

ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯೇ ಟಿಪ್ಪರ ವಾಹನದ ಚಾಲಕನಾಗಿದ್ದ ಎಂದರೆ ನಾನು ನೋಡಿರುವುದಿಲ್ಲ. ಆರೋಪಿಗೆ ಸಹಾಯ ಮಾಡಲು ಆತನನ್ನು ನೋಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

3. ಚಾಸಾ–6 ರವರ ಮನೆಯ ನಿಮ್ಮ ಮನೆಯ ಸಮೀಪ ಇರುತ್ತದೆ ಎಂದರೆ ಸರಿಯಲ್ಲ. ಅವರು ನಿಮಗೆ ಪರಿಚಯ ಎಂದರೆ ಸರಿ. ನಿಮ್ಮ ಸಂಬಂಧಿಕರಾ ಎಂದರೆ ಅಲ್ಲ ಎಂದು ನುಡಿಯುತ್ತಾರೆ. ಅವರು ವಿಮಾ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ್ದರ ಬಗ್ಗೆ ನಿಮಗೆ ಗೊತ್ತಿರುತ್ತದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅವರಿಗೆ ಪರಿಹಾರ ಸಿಗಬೇಕು ಎಂದು ನಿಮಗೆ ಮನಸ್ಸು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಮೊದಲು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರಿಂದ ಬಹಳಷ್ಟು ದುಡ್ಡು ಖರ್ಚಾಗಿರುತ್ತದೆ ಎಂದು ನುಡಿಯುತ್ತಾರೆ. ಹಿಂದೆ ಸಮನ್ಸ ಜಾರಿಯಾದಾಗ ನೀವು ಚಾಸಾ–6 ರವರ ಹತ್ತಿರ ಮಾತನಾಡಿರುತ್ತೀರಿ ಎಂದರೆ ಸರಿ. ಆಗ ಚಾಸಾ–6 ನಿಮಗೆ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಹೋಗಲು ಹೇಳಿರುತ್ತಾರೆ ಎಂದರೆ ಸರಿ.

4. ನಿಮ್ಮ ಪ್ರಕಾರ ಅಪಘಾತವಾಗುವ ಸಂದರ್ಭದಲ್ಲಿ ನಿಡಿ–2 ರಲ್ಲಿ ಡಂಪರ್ ವಾಹನವು ಡಿವೈಡರ್ ನಿಂದ ಎಷ್ಟು ಅಂತರದಲ್ಲಿ ಇತ್ತು ಎಂದರೆ ಸಾಕ್ಷಿಯು 3 ಅಡಿ ಅಂತರದಲ್ಲಿ ಇತ್ತು

ಎಂದು ನುಡಿಯುತ್ತಾರೆ. ನೀವು ಬೈಕ್, ಕಾರನ್ನು ಓಡಿಸುತ್ತೀರಾ ಎಂದರೆ ಸಾಕ್ಷಿಯು ಬೈಕನ್ನು ಓಡಿಸುತ್ತೇನೆ. ಪರವಾಣಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಸಂಚಾರ ನಿಯಮಗಳ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಬೈಕಿನ ಯಾವ ಭಾಗಕ್ಕೆ ಡಂಪರ್ ತಾಗಿರುತ್ತದೆ ಎಂದರೆ ಸಾಕ್ಷಿಯು ಬೈಕಿನ ಬಲಭಾಗಕ್ಕೆ ತಾಗಿರುತ್ತದೆ ಎಂದು ನುಡಿಯುತ್ತಾರೆ. ಬಲಭಾಗಕ್ಕೆ ನಿಖರವಾದ ಯಾವ ಭಾಗಕ್ಕೆ ತಾಗಿರುತ್ತದೆ ಎಂದರೆ ಸಾಕ್ಷಿಯು ಹಿಂಬದಿಯ ಬಂಪರ್ ಭಾಗಕ್ಕೆ ತಾಗಿರುತ್ತದೆ ಎಂದು ನುಡಿಯುತ್ತಾರೆ. ಡಂಪರ್ ನ ಯಾವ ಭಾಗಕ್ಕೆ ತಾಗಿರುತ್ತದೆ ಎಂದರೆ ಸಾಕ್ಷಿಯು ಡಂಪರಿನ ಬಲಭಾಗಕ್ಕೆ ತಾಗಿರುತ್ತದೆ ಎಂದು ನುಡಿಯುತ್ತಾರೆ. ಬಲಭಾಗದ ಯಾವ ಭಾಗಕ್ಕೆ ತಾಗಿರುತ್ತದೆ ಎಂದರೆ ಸಾಕ್ಷಿಯು ನಾನು ಬೈಕ್ ಸವಾರನ ಉಪಚಾರದಲ್ಲಿ ಇದ್ದಿದ್ದರಿಂದ ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಅದ ಕಾರಣ ನೀವು ಅಫಘಾತವನ್ನು ಕಣ್ಣಿನಿಂದ ನೋಡಿರುವುದಿಲ್ಲ, ಅಪಘಾತವಾದ ನಂತರ ಬಂದಿರುತ್ತೀರಿ ಎಂದರೆ ಸರಿ. ಅಪಘಾತವಾದ ಎಷ್ಟು ಹೊತ್ತಿನ ನಂತರ ಬಂದಿರುತ್ತೀರಿ ಎಂದರೆ ಸಾಕ್ಷಿಯು ಒಂದೂವರೆ ನಿಮಿಷದ ನಂತರ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ ಕಂಡುಬರುವ ರಸ್ತೆಯ ಮೇಲಿರುವ ಗುರುತುಗಳು ಏನೆಂದು ಹೇಳಲು ಆಗುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ-3 ರಲ್ಲಿ ಕಂಡುಬರುವಂತೆ Stop ಎಂದು ಬರೆದ ಕಡೆಯಲ್ಲಿ ಯಾವುದೇ ವಾಹನವು ಇನ್ನೊಂದು ವಾಹನವನ್ನು ಓವರ್ ಟೇಕ್ ಮಾಡಿಕೂಂಡು ಬರುವ ಹಾಗೆ ಇರುವುದಿಲ್ಲ ಎಂದರೆ ಸರಿ. ನಿಡಿ-4 ರಲ್ಲಿ ಬಲಕ್ಕೆ ವಾಹನವನ್ನು ತಿರುಗಿಸಿ ಹೋಗುವಂತ ಗುರುತು ಇರುತ್ತದೆ ಎಂದರೆ ಸರಿ. ಅಲ್ಲಿ ಹೋಗುವಂತ ವಾಹನಗಳು ನೀವು ಹೇಳುವ ಹಾರವಾಡ

ಕ್ರಾಸಿಗೆ ಬಲಕ್ಕೆ ತಿರುಗಿ ಹೋಗಬಹುದು ಎಂದರೆ ಸರಿ. ನಿಡಿ–4 ರಲ್ಲಿ ಕಾರವಾರದಿಂದ ಅಂಕೋಲಾಕಡೆಗೆ ನೇರವಾಗಿ ಹೋಗುವ ಗುರುತು ಇದೆ ಎಂದರೆ ಸರಿ. ನಿಡಿ–7 ರಲ್ಲಿ ನೇರವಾಗಿ ಹೋಗುವ ಹಾಗೂ ಹಾರವಾಡ ಕ್ರಾಸಿಗೆ ಹೋಗಲು ಗುರುತು ಇರುತ್ತದೆ ಎಂದರೆ ಸರಿ. ನೀವು ಹೇಳುವ ಘಟನಾ ಸ್ಥಳವು ನೀವು ಖಾಯಂ ಓಡಾಡುವ ಸ್ಥಳ ಎಂದರೆ ಸರಿ. ನಿಡಿ–3 ರಲ್ಲಿ stop ಎಂದು ತೋರಿಸಿದ ರಸ್ತೆಯು ಅಗಲವಿದ್ದು, U turn ನಂತರ ರಸ್ತೆಯು ಚಿಕ್ಕದಾಗಿರುತ್ತದೆ ಎಂದರೆ ಸರಿ. ಮುಂದೆ ಇರುವ ಚಿಕ್ಕ ರಸ್ತೆಯು stop ಎಂದು ಬರೆದಿರುವ ಪಕ್ಕದಲ್ಲಿ ಇರುವ ಗುರುತಿಗೆ ಸಮಾನವಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಗೆ ಹೋಲಿಸಿದರೆ stop ಎಂದು ಬರೆದಿರುವ ರಸ್ತೆಯ ಭಾಗವು ಹೆಚ್ಚುವರಿ ರಸ್ತೆ ಎಂದರೆ ಸರಿ. ಬೈಕ್ ಸವಾರರು ಹೆಲ್ಮೇಟನ್ನು ಹಾಕಿಕೊಂಡಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಬೈಕ್ ಯಾರು ಚಾಲನೆ ಮಾಡುತ್ತಿದ್ದರು ಎಂದು ಗೊತ್ತಾ ಎಂದರೆ ಸಾಕ್ಷಿಯು ಅವರು ಹೆಸರು ಗೊತ್ತಿರುವುದಿಲ್ಲ, ಅಗಸೂರು ಹೊನ್ನಳ್ಳಿಯವರು ಎಂದು ನುಡಿಯುತ್ತಾರೆ. ಬೈಕ್ ಚಾಲನೆ ಮಾಡುತ್ತಿದ್ದವರು ಅರ್ಜೆಂಟಾಗಿ ಬೆಂಗಳೂರಿಗೆ ಹೋಗಬೇಕಾಗಿತ್ತು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನೀವು ಯಾವ ಕಡೆಯಿಂದ ಯಾವ ಕಡೆಗೆ ಬರುತ್ತಿದ್ದೀರಿ ಎಂದರೆ ಸಾಕ್ಷಿಯು ಹಾರವಾಡದಿಂದ ಮನೆಗೆ ಹೋಗಲು ಅಂಕೋಲಾ ಕಡೆಗೆ ಬರುತ್ತಿದ್ದೆ ಎಂದು ನುಡಿಯುತ್ತಾರೆ. ಅಪಘಾತವಾಯಿತು ಎನ್ನುವ ಸ್ಥಳವು ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈಕ್ ಚಲಾಯಿಸುವವರು ಯಾವ ಅಂಚಿನಲ್ಲಿ ಇರಬೇಕು ಎಂದರೆ ಸಾಕ್ಷಿಯು ಬಲಗಡೆ ಇರಬೇಕು ಎಂದು ನುಡಿಯುತ್ತಾರೆ. ಆ ದಿನ ನೀವು ಯಾರ ಮನೆಗೆ ಕೆಲಸಕ್ಕೆ

ಹೋಗಿರುತ್ತೀರಿ ಎಂದರೆ ಸಾಕ್ಷಿಯು ಶೆಟ್ಟರ ಮನೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಬೈಕ್ ಸವಾರರು ಡಂಪರ್ ವಾಹನ ತಾಗಿ ಬಿದ್ದಿರುತ್ತಾರಾ ಅಥವಾ ಬಿದ್ದ ನಂತರ ವಾಹನ ಏನಾದರೂ ತಾಗಿರುತ್ತಾ ಎಂದರೆ ಸಾಕ್ಷಿಯು ಡಂಪರ್ ವಾಹನವು ಬೈಕಿಗೆ ತಾಗಿದ್ದರಿಂದ ಬಿದ್ದಿರುತ್ತಾರೆ ಎಂದು ನುಡಿಯುತ್ತಾರೆ. ಕೈಸನ್ನೆ ಮಾಡದೇ ತಿರುಗಿಸಿದರು ಎಂದು ನಿಮಗೆ ಯಾರು ಹೇಳಿರುತ್ತಾರೆ ಎಂದರೆ ನಾನೇ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತವಾದ ಒಂದೂವರೆ ನಿಮಿಷದ ನಂತರ ಬಂದರೆ ಅಪಘಾತವನ್ನು ನೋಡಲು ಸಾಧ್ಯವಿಲ್ಲ ಎಂದರೆ ಸರಿ. ನೀವು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸ್ ಠಾಣೆಗೆ ಏನಾದರೂ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಅದೇ ದಿನ ಚಾಸಾ-6 ರವರ ಜೊತೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಅದಾದ ನಂತರ ಠಾಣೆಗಾಗಲಿ ಅಥವಾ ಘಟನಾ ಸ್ಥಳಕ್ಕಾಗಲಿ ಹೋಗಿರುವುದಿಲ್ಲ ಎಂದರೆ ಸರಿ. ಈ ಅಪಘಾತದಲ್ಲಿ ಡಂಪರ್ ವಾಹನದ ಚಾಲಕನ ಅತೀ ವೇಗ ಅಥವಾ ನಿಷ್ಕಾಳಜೀತನ ಇರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಬೈಕ್ ಸವಾರನು ಸಂಚಾರ ನಿಯಮವನ್ನು ಉಲ್ಲಂಘಿಸಿ ಓವರಟೇಕ್ ಮಾಡಿದ್ದರಿಂದ ಸದರಿ ಅಪಘಾತವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಮೃತ ಹಾಗೂ ಚಾಸಾ-6 ರವರಿಗೆ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ನೀವು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಮೃತರು ಮರಣಪಟ್ಟಿದ್ದರಿಂದ ಅವರಿಗೆ ಪರಿಹಾರ ಸಿಗಬೇಕು ಎಂದು ನುಡಿಯುತ್ತಾರೆ. ಐ ಆರ್ ಬಿ ಕಂಪನಿಯವರು ಬೇರೆ ಬೇರೆ ಊರಿನ ಚಾಲಕರನ್ನು ಕರೆಯಿಸಿ, ಉದ್ಯೋಗ ಕೊಡುವುದರಿಂದ ಸೀಬರ್ಡ ಕಾಲೋನಿಯವರು ಮಾತನಾಡುತ್ತಾರೆ ಎಂದರೆ ನನಗೆ

ಗೊತ್ತಿರುವುದಿಲ್ಲ. ಸರಕಾರಿ ಅಭಯೋಜಕರು ಕೇಳಿದ ಪ್ರಶ್ನೆಗೆ ಸರಿ ಎಂದು ಉತ್ತರಿಸಲು ಚಾಸಾ–6 ರವರು ಹೇಳಿದ್ದರಿಂದ ನೀವು ಸರಿ ಎಂದು ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತವಾಯಿತು ಎನ್ನವ ಸಂದರ್ಭದಲ್ಲಿ ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿಯು 7–8 ಜನ ಸೇರಿದ್ದರು ಎಂದು ನುಡಿಯುತ್ತಾರೆ. ಅವರು ಹೆಸರು ಮತ್ತು ಜಾತಿ ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.